ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/03/ಸಿಸಿಟಿಕ್/2023(978425)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001.
ದಿ:13-03-2024.

ಇವರಿಗೆ,

ಪ್ರಾಚಾರ್ಯರು,
ಸಿಪಿಸಿ ಸರ್ಕಾರಿ ಪಾಲಿಟೆಕ್ನಿಕ್,
ಮೈಸೂರು

ಮಾನ್ಯರೇ,

ವಿಷಯ:- ಸಂಸ್ಥೆಯಲ್ಲಿ ಆಯೋಜಿಸುತ್ತಿರುವ "NBA Accreditation Process for Diploma Programs" ಎಂಬ ವಿಷಯದ ಅಲ್ಪಾವಧಿ ತರಬೇತಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:-
1. ತಮ್ಮ ಪತ್ರ ಸಂಖ್ಯೆ: ಸಿಪಿಸಿಪಿ : ಸಿಬ್ಬಂದಿ : 2023-24/832 ದಿ:07-03-2024
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ : 10 : ಸಿಸಿಟೆಕ್ : 2017-18 : 2776 : ದಿನಾಂಕ:18-01-2019.

-----

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ (1)ರ ಪತ್ರದಲ್ಲಿ ಸಂಸ್ಥೆಯ ಸಿಸಿಟೆಕ್ ಉಪಘಟಕದ ಅಡಿಯಲ್ಲಿ ದಿನಾಂಕ:18/03/2024 ರಿಂದ ದಿ:22/03/2024 ರವರೆಗೆ ಸಿ-20 ಪಠ್ಯಕ್ರಮಕ್ಕನುಗುಣವಾಗಿ "NBA Accreditation Process for Diploma Programs" ಎಂಬ ವಿಷಯದ ಬಗ್ಗೆ ಐದು ದಿನಗಳ ಅಲ್ಪಾವಧಿ ತರಬೇತಿಯನ್ನು ಆಯೋಜಿಸಲು ಅನುಮತಿಯನ್ನು ಕೋರಿರುತ್ತೀರಿ.

ಈ ಹಿನ್ನೆಲೆಯಲ್ಲಿ ಸದರಿ ತರಬೇತಿಯಲ್ಲಿ ಭಾಗವಹಿಸುವ ಉಪನ್ಯಾಸಕರುಗಳು ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗದಂತೆ ತರಬೇತಿಯ ಅವಧಿಯ ಪಾಠಪ್ರವಚನಗಳನ್ನು ತರಬೇತಿ ಮುಗಿದ ನಂತರ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಂಡು ಸರಿದೂಗಿಸುವ ಷರತ್ತುಗಳಿಗೊಳಪಟ್ಟು, ತಮ್ಮ-ತಮ್ಮ ಸಂಸ್ಥೆಗಳ ಪ್ರಾಂಶುಪಾಲರುಗಳಿಂದ ಅನುಮತಿ ಪಡೆದು ಸದರಿ ತರಬೇತಿಯಲ್ಲಿ ನೊಂದಾಯಿಸಿಕೊಳ್ಳಲು ಸೂಚಿಸುವ ಮೂಲಕ ಉಲ್ಲೇಖ (2) ರ ಈ ಕಛೇರಿ ಸುತ್ತೋಲೆಯಲ್ಲಿನ ನಿಯಮ / ಷರತ್ತುಗಳನ್ನು

CamScanner

ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿ, ತರಬೇತಿ ಕಾರ್ಯಕ್ರಮವನ್ನು ನಿಯಮಾನುಸಾರ ನಡೆಸಲು ಅನುಮತಿ ನೀಡಲಾಗಿದೆ.

ಸದರಿ ತರಬೇತಿಯಲ್ಲಿ ಭಾಗವಹಿಸಲು ನೊಂದಾಯಿಸಿಕೊಳ್ಳುವ ಉಪನ್ಯಾಸಕರ ಪಟ್ಟಿಗೆ ದಿನಾಂಕ:15-03-2024 ರೊಳಗಾಗಿ ಇಲಾಖೆಯಿಂದ ಕಡ್ಡಾಯವಾಗಿ ಅನುಮೋದನೆ ಪಡೆದು, ತದನಂತರ ತರಬೇತಿಯನ್ನು ಪ್ರಾರಂಭಿಸಲು ಈ ಮೂಲಕ ಸೂಚಿಸಲಾಗಿದೆ.

ತಮ್ಮವಿಶ್ವಾಸಿ,

ಜಂಟಿ ನಿರ್ದೇಶಕರು (ಸಿಡಿಸಿ).

13/3/24

13/3/24

ಪ್ರತಿ:-

ಸಿಸಿಟೆಕ್ – ಕಡತಕ್ಕೆ

ಇ-ಆಡಳಿತವಿಭಾಗಕ್ಕೆ – ಇಲಾಖೆಯ ವೆಬ್ ಸೈಟ್‌ನಲ್ಲಿ ಪ್ರಚುರಪಡಿಸಲು.

CamScanner